ಹುಬ್ಬಳ್ಳಿ ವಿದ್ಯುತ್ ಸರಬರಾಜುಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ.)
ಅಧೀಕ್ಷಕ ಇಂಜಿನೀಯರ(ವಿ)
ಕಾರ್ಯ & ಪಾಲನೆ ವೃತ್ತ ಕಛೇರಿ, ನೆಹರುನಗರ,
ಬೆಳಗಾವಿ - 590 010.

HUBLI ELECTRICITY SUPPLY COMPANY LTD
( Govt. of Karnataka undertaking)
Superintending Engineer (Ele)
O & M Circle Office,
Neharu nagar, Belagavi-590 010

Phone:0831-247249 E-mail ID:seebgm.heccom@gmail.com
Corporate Identity Number(CIN): U31401KA2002SGC030437

# ಗ್ರಾಹಕರ ಕುಂದುಕೊರತೆಗಳ ನಿವಾರಣೆ ವೇದಿಕೆ

## ಕಾರ್ಯ ಮತ್ತು ಪಾಲನೆ ವೃತ್ತ, ಹುವಿಸಕಂನಿ, ಬೆಳಗಾವಿ, ಬೆಳಗಾವಿ ಜಿಲ್ಲೆ

**ಪ್ರಕರಣ ಸಂಖ್ಯೆ:18/2019**

**ವೇದಿಕೆಯ ಸದಸ್ಯರು:**

ಶ್ರೀ **ಗಿರಿಧರ ಕುಲಕರ್ಣಿ,** ಅಧೀಕ್ಷಕ ಇಂಜಿನೀಯರ(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಹುವಿಸಕಂನಿ, ಬೆಳಗಾವಿ ಹಾಗೂ ವೇದಿಕೆಯ ಅಧ್ಯಕ್ಷರು.

ಶ್ರೀ **ಶರಿಪುದ್ಧಿನ ಅಹ್ಮದ,** ಉಪಲೆಕ್ಕ ನಿಯಂತ್ರಣಾಧಿಕಾರಿ ಕಾರ್ಯ ಮತ್ತು ಪಾಲನೆ ವೃತ್ತ, ಹುವಿಸಕಂನಿ, ಬೆಳಗಾವಿ ಹಾಗೂ ವೇದಿಕೆಯ ಸದಸ್ಯರು.

ಶ್ರೀ **ಸುನೀಲ ಸಾಣಿಕೊಪ್ಪ,** ವಕೀಲರು, ಆಯೋಗದಿಂದ ನಿಯೋಜಿಸಲಾದ ಸದಸ್ಯರು.

**ಶ್ರೀ ಶಾಮಸುಂದರ ಬಿ ಕೋರಡೆ**
(R.R.NO: LKPR 53927)
ಆರ್ ಎಸ್ ನಂ:62/2, ಲಖನಾಪೂರ ಗ್ರಾಮ,
ತಾ:ಚಿಕ್ಕೊಡಿ, ಜಿ:ಬೆಳಗಾವಿ. .............**ದೂರುದಾರರು.**

ವಿರುದ್ದ,

**ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)**
ಕಾರ್ಯ ಮತ್ತು ಪಾಲನೆ ಉಪ ವಿಭಾಗ,
ಹುವಿಸಕಂನಿ, ನಿಪ್ಪಾಣಿ. .................**ಪ್ರತಿವಾದಿಗಳು.**

**ಪೀಠಿಕೆ:**

1. ದೂರುದರರು, ಈ ವೇದಿಕೆಗೆ ದಿನಾಂಕ:16.09.2019 ರಂದು ಈ ಕೆಳಗೆ ವಿವರಿಸಿದಂತೆ ದೂರನ್ನು ನೀಡಿರುತ್ತಾರೆ; Non-co-opration by the A.E.E.(Ele) HESCOM, Nipani to carry out the power supply work under self execution. ಆದ್ದರಿಂದ, ಸದರಿ ದೂರುದಾರರು ಈ ವಿಷಯವನ್ನು ಇತ್ಯರ್ಥಪಡಿಸುವಂತೆ ಕೋರಿ ಈ ವೇದಿಕೆಗೆ ದಾವೆ ದಾಖಲಿಸಿರುತ್ತಾರೆ.

2. ಸದರಿ ದೂರು ಕುರಿತು, ಈ ಕ್ಛೇರಿಯ ಸಭೆಯ ಸೂಚನೆ ಪತ್ರ ಸಂಖ್ಯೆ: ಬೆ/ಗ್ರಾವೆ/ಅಇಂ(ವಿ)/ಉಲೆನಿ/ಹಿಸ-2/2019-20/ಸಿ ವಾಯ್ ಎಸ್-202 ದಿ:25.10.2019 ರನ್ವಯ, ದಿನಾಂಕ:04.11.2019ರ ಅಪರಾಹ್ನ 03:30 ಕ್ಕೆ ವಿಚಾರಣೆಯನ್ನು ಈ ಕಛೇರಿಯಲ್ಲಿ ನಡೆಸಲಾಯಿತು. ತದನಂತರದಲ್ಲಿ, ದೂರುದಾರರಿಗೆ ಮತ್ತು ಪ್ರತಿವಾದಿಗಳಿಗೆ ಲಖಿತ ರೂಪದಲ್ಲಿ ತಮ್ಮ ವಾದವನ್ನು ಮಂಡಿಸಲು ಸೂಚಿಸಲಾಯಿತು.

3. ಅದರಂತೆ, ದೂರುದಾರರು ದಿನಾಂಕ:14.11.2019 ರಂದು ಹಾಗೂ ಪ್ರತಿವಾದಿ ಇವರು ದಿನಾಂಕ:27.09.2019 ರಂದು ಈಗಾಗಲೇ ಈ ವೇದಿಕೆಗೆ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

**ಅ.ದೂರುದಾರರು ಸಲ್ಲಿಸಿರುವ ಲಿಖಿತ ಹೇಳಿಕೆ ವಿವರ;**

I had applied for 60 HP, M.P connection in R.S NO.66/2 of Lakhanapur village towards the HSCOM. & according HESCOM has sanctioned power supply vide order dt: 23.10.2017 under the 'Self Execution' work.

While carrying out the work according to the sanctioned drawing/estimate through Class I Govt. electrical contractor, the work was obstructed by the third parties in the neighbouring area. ( adjacent land owners). And we were forced to stop the work incomplete.

At that time, due to the urgent need of power supply, we had accepted the electricity connection to our installation from the existing I.P. set feeder which is already present in my land. From that feeder I have been able to enjoy restricted power supply for my installation.

Meanwhile I had approached to **the Civil Court of Nipani** & have got the suitable prohibitory order against the persons which were obstructing my power supply work.

After getting the court order, I approached the AEE. HESCOM, Nipani and The E.E., HESCOM, Chikodi to co-operate me to carry out the remaining incomplete work & submitted my representation. After which E.E., HESCOM,Chikodi had directed to AEE,HESCOM, Nipani to monitor & supervise the above said work vide letter No: 1509-10 dt: 22/05/2019. The E.E., HESCOM, chikodi had directed verbally to the AEE,HESCOM, Nipani. But it did not worked.

At that time AEE,Nipani send me a letter No.: 485 dt 28/05/2019, stating that-he is unable supervise my work as it has not been completed within stipulated period & it is not at all possible to erect the electric poles due to the water flow/Nala in between.

After which I Submitted another representation to E.E., HESCOM, Chikodi requesting to renew the power sanction letter for some more reasonable period.

But E.E., HESCOM, Chikodi did send another letter to AEE, Nipani to prepare the revised estimate of incomplete work.

I did also gave another representation to AEE, Nipani to prepare the estimate of the incomplete work according to modified S.R. rates which were increased in the meantime.

But,AEE,Nipani in his letter No.: 1155-57 dt: 22/07/2019 raised some different unlawful issues and kept me deprieved of the continuous power supply.

It is self execution work, so there is not at all harm/monetory burdon to the HESCOM in this case. I have got the power sanction & Electric supply for my M.P.connection in accordance with the HESCOM rules & regulation.

As per the circular issued by the G.M. HESCOM, No.: CYS-2361 dtd: 30/08/2017 itself, it is clear that apart from ownership document, there is no need of any other document to avail the power supply for industrial purpose.

So, the issue raised by AEE, Nipani regarding N.O.C. from local body does not arise.

AEE,P.W.D. chikodi in his letter No.: 1325,Dtd: 21/02/2018 has also directed to carry out our work accordingly.

**Prayer:**

I. It is not the 'only' case where High Tension Power line is crossing over this Nala. In our vicinity hundreds of electric connections are running which are given after crossing the H.T. power line over this Nala.

So, I may kindly be allowed to carry out the work according to earlier sanctioned drawing.

II. I have already deposited Rs.35254/- for the purpose of Supervision charges to the HESCOM. But due to above mentioned circumstances the said work has left incomplete.

I am ready to pay the Additional Supervision charges if any, occurred due to modified S.R. rates by HESCOM.

After struggling for justice & my lawful right to enjoy the continuous power supply for so long time I am hopeful & confident that this Forum will do in the interest of justice & equity. So, this authority is kindly requested to make the suitable order in this regard.

ಬ.ಪ್ರತಿವಾದಿ ಸಲ್ಲಿಸಿರುವ ಲಿಖಿತ ಹೇಳಿಕೆ ವಿವರ;

ಲಖನಾಪೂರ ಗ್ರಾಮದಲ್ಲಿ ರಿ.ಸ.ನಂ 66/2 ದರಲ್ಲಿ ಶ್ರೀ ಶ್ಯಾಮಸುಂದರ ಬಿ. ಕೊರಡೆ ಸಾ. ನಿಪ್ಪಾಣಿ ಯವರು ಪ್ರಿಂಟಿಂಗ್ ಪ್ರೆಸ್ ಹಾಕಲಿಕ್ಕೆ ಕೈಗಾರಿಕಾ ವಿದ್ಯುತ ದರದಲ್ಲಿ 60 ಹೆಚ್.ಪಿ. ವಿದ್ಯುತ್ ಸರಬರಾಜು ಮಾಡಬೇಕು ಅಂತ ಖಡಕಲಾಟ ಶಾಖೆಯಲ್ಲಿ ಹಾಗು ನಿಪ್ಪಾಣಿ ಉಪ-ವಿಭಾಗದಲ್ಲಿ ಅರ್ಜಿ ನೋಂದಾಯಿಸಿದ್ದು, ಅದರ ಪೂರ್ಣವಾದ ವಿವರ ಈ ಕೆಳಗಿನಂತೆ ಇರುತ್ತದೆ.

01. ಅರ್ಜಿದಾರರ ಹೆಸರು:- ಶ್ರೀ ಶ್ಯಾಮಸುಂದರ ಬಳವಂತ ಕೊರಡೆ
02. ಅರ್ಜಿ ನೋಂದಾಯಿತ ದಿನಾಂಕ:- 07.10.2017
03. ಶಾಖಾಧಿಕಾರಿಗಳು ಖಡಕಲಾಟ ಸ್ಥಳ ಪರಿಶೀಲಿಸಿದ ದಿನಾಂಕ :-10.10.2017
04. ಅಂದಾಜು ಪತ್ರಿಕೆ ತಯಾರಿಸಿದ ದಿನಾಂಕ : 20.10.2017
05. ಕೈಗಾರಿಕಾ ಸ್ಥಾವರದ ಸ್ಥಳವು ಎನ್.ಎ ಆಗಿರುವುದಿಲ್ಲ, ರಿ.ಸ. ನಂಬರನಲ್ಲಿ ಪತ್ರೆ ಶೆಡ್ ಇರುತ್ತದೆ.
06. ವಿಭಾಗೀಯ ಕಛೇರಿಗೆ ಅಂದಾಜು ಪತ್ರಿಕೆ ತಯಾರಿಸಿ ಸಲ್ಲಿಸಿದ ದಿನಾಂಕ : 23.10.2017
07. ಅರ್ಜಿದಾರರಿಗೆ ಪವರ ಸಾಂಕ್ಷನ್ ಕೊಟ್ಟ ದಿನಾಂಕ :- 23.10.2017 (ಸ್ವಯಂ ಆರ್ಥಿಕ ಯೋಜನೆ ಅಡಿಯಲ್ಲಿ)
08. ಅರ್ಜಿದಾರರು, ಠೇವಣಿ ಹಣ ಹಾಗು ಕೆಲಸ ಸ್ವಯಂ ಆರ್ಥಿಕ ಯೋಜನೆ ಅಡಿಯಲ್ಲಿ, ಕೆಲಸ ನಿರ್ವಹಿಸಿಕೊಳ್ಳುತ್ತೇವೆ ಅಂತ ಬರೆದು ಕೊಟ್ಟ ಮುಚ್ಚಳಿಕೆ ಪತ್ರ ದಿನಾಂಕ:- 27.10.2017
09. ಸ್ವಯಂ ಆರ್ಥಿಕ ಯೋಜನೆ ಅಡಿಯಲ್ಲಿ, ವಿಭಾಗೀಯ ಕಛೇರಿಯಿಂದ ಅನುಮೋದನೆ ಆದ ದಿನಾಂಕ: 27.10.2017
10. ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದ ಗುತ್ತಿಗೆದಾರರು, ಕೆಲಸ ನಿರ್ವಹಿಸಿದ ದಿನಾಂಕ :- 28.10.2017
11. ಕೆಲಸ ನಿರ್ವಹಿಸುವಾಗ ಆಜು-ಬಾಜು ಹೊಲದ ರೈತರು ವಿದ್ಯುತ ಕಂಬಗಳನ್ನು ಅಳವಡಿಸಲು ತಕರಾರು ಮಾಡಿದ ದಿನಾಂಕ: 30.10.2017
12. ವಿದ್ಯುತ ಗುತ್ತಿಗೆದಾರರು ರಿ.ಸ.ನಂ. 66/2 ದರಲ್ಲಿ 1x100 ಕೆ.ವಿ.ಎ. ವಿದ್ಯುತ ಪರಿವರ್ತಕ ಅಳವಡಿಸಿ ದಿನಾಂಕ: 10.12.2017
13. ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರಾದ ಶ್ರೀ ಸಸಾಲಟ್ಟಿ ಸಾಹೇಬರು ಹಾಗೂ ನಾನು ದಿನಾಂಕ 18.12.2017 ರಂದು ಸ್ಥಳ ಪರಿಶೀಲಿಸಿ, ತಗಾದೆ ಬಗೆ ಹರಿಸಲು ಹೋದಾಗ, ಶ್ರೀ ಕೇಸರಕರ ಹಾಗು ಇತರರು ಖುದ್ದಾಗಿ ಬೇಟಿಯಾಗಿ, ನಮ್ಮ ಹೊಲದ ಬಾಂದದ ಅಣ್ಣ-ತಮ್ಮಂದಿರ ತಕರಾರು ಕೋರ್ಟದಲ್ಲಿ ದಾವೆ ಇದ್ದು. ಅದು ಮುಗಿಯುವವರೆಗೆ ನಮ್ಮ ಹೊಲದಲ್ಲಿ ವಿದ್ಯುತ ಕಂಬ ಅಳವಡಿಸಬಾರದೆಂದು ತಕರಾರು ಮಾಡಿರುತ್ತಾರೆ.
14. ದಿನಾಂಕ:- 02.01.2018 ರಂದು, ಖುದ್ದಾಗಿ ಶ್ರೀ ಶ್ಯಾಮಸುಂದರ ಬಿ. ಕೊರಡೆ ಇವರು ಭೇಟಿಯಾಗಿ, ನನ್ನ ಕಾರ್ಖಾನೆಗೆ ತ್ವರಿತವಾಗಿ ವಿದ್ಯುತ ಪೂರೈಸಿ ಹಾಗೂ ಸಮೀಪದಲ್ಲಿ ಇರುವ ಐ.ಪಿ. ಲೈನದ ಮೇಲೆ ವಿದ್ಯುತ ಪೂರೈಸಬೇಕು ಅಂತ ವಿನಂತಿಸಿಕೊಂಡರು. ಅವರಿಗೆ ಪ್ರತಿ ದಿವಸ ಏಳು ತಾಸು ವಿದ್ಯುತ ಮಾತ್ರ ಇರುತ್ತದೆ ಅಂತ ತಿಳಿ ಹೇಳಿದರೂ, ನನಗೆ ಏಳು ತಾಸು ಮಾತ್ರ ವಿದ್ಯುತ್ ಪೂರೈಸಿರಿ ಅಂತಾ ರೂ ನೂರು ಛಾಪಾ ಕಾಗದದ ಮೇಲೆ ಲಿಖಿತ ರೂಪದಲ್ಲಿ ಬರೆದು ಕೊಟ್ಟು ಆರ್.ಆರ್. ನಂಬರ ಕೊಡಿರಿ ಅಂತ ವಿನಂತಿಸಿಕೊಂಡರು.
15. ದಿನಾಂಕ :- 05.01.2018 ರಂದು ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಎಲ್.ಟಿ.ಎಮ್.ಆರ್.ಟಿ. ಚಿಕ್ಕೋಡಿಯವರು ಸ್ಥಳ ಪರಶೀಲಿಸಿ, ಪ್ರಿ ಕಮಿಷನ್ ಟೆಸ್ಟ ಮಾಡಿ, ವಿದ್ಯುತ ಪ್ರಾರಂಭ ಮಾಡಿ ಅದಕ್ಕೆ ಗ್ರಾಹಕರಿಂದ ರುಜು ಪಡೆದಿರುತ್ತಾರೆ. ಪ್ರೀ ಕಮಿಷನಿಂಗ ಟೆಸ್ಟ ಮಾಡುವಾಗ ಕೈಗಾರಿಕಾದಲ್ಲಿ ಯಾವುದೇ ಉಪಕರಣಗಳನ್ನು ವಿದ್ಯುತ್ ಗ್ರಾಹಕರು ಜೋಡಿಸಿರುವುದಿಲ್ಲ ಹಾಗೂ ಅಳವಡಿಸಿರುವುದಿಲ್ಲ.
16. 60 ಹೆಚ್.ಪಿ. ಎಮ್.ಪಿ. ಕೈಗಾರಿಕೆ ಆರ್.ಆರ್. ನಂ **ಎಲ್.ಕೆ.ಪಿ.ಆರ.ಎಮ್.ಪಿ. 53927** ಒದಗಿಸಲಾಗಿರುತ್ತದೆ.
17. ದಿನಾಂಕ 22.01.2018 ರಂದು ಶ್ರೀ ಶ್ಯಾಮಸುಂದರ ಕೊರಡೆ ಸಾ.ನಿಪ್ಪಾಣಿ ಯವರು ನೇರವಾಗಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಹು.ವಿ.ಸ.ಕಂ.ನಿ ಹುಬ್ಬಳ್ಳಿಯವರಿಗೆ ಬೇಟಿಯಾಗಿ, ಲಿಖಿತ ರೂಪದಲ್ಲಿ ಅರ್ಜಿಕೊಟ್ಟು ನನಗೆ 24 ಗಂಟೆ ವಿದ್ಯುತ ಪೂರೈಸುವ ಲೈನದ ಮೇಲೆ ವಿದ್ಯುತ ಪೂರೈಸಲು ವಿನಂತಿ ಕೊಟ್ಟಿರುತ್ತಾರೆ.
18. ದಿನಾಂಕ 23.01.2018 ರಂದು ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು, ನಾನು ಹಾಗೂ ಶಾಖಾಧಿಕಾರಿಗಳು ಖಡಕಲಾಟ, ಮತ್ತೆ ಲಖನಾಪೂರ ಗ್ರಾಮಕ್ಕೆ ಹೋಗಿ ಶ್ರೀ ಕೇಸರಕರ ಮತ್ತು ಇತರರ ಮನವೊಲಿಸಿ, ಕೆಲಸ ಮಾಡಲು ಅನುವು ಮಾಡಿಕೊಡಬೇಕು ಅಂತ ಹಲವಾರು ಸಲ ವಿನಂತಿಸಿಕೊಂಡರೂ. ರೈತರು ಒಪ್ಪಿಗೆ ಕೊಡಲಿಲ್ಲ.
19. ದಿನಾಂಕ 24.12.2018 ರಂದು ಗುತ್ತಿಗೆದಾರರು ಹಾಗೂ ಶಾಖಾಧಿಕಾರಿಗಳು ಕೆಲಸ ನಿರ್ವಹಿಸಲು ಹೋದಾಗ,ಸುಮಾರು 25 ಜನರು ಕೂಡಿಕೊಂಡು ಹೊಡೆಯಲು ಬಂದರು, ನ್ಯಾಯಾಲಯದಲ್ಲಿ ಕೇಸ್ ಇದ್ದು, ಅದು ಮುಗಿಯುವವರೆಗೆ ಕೆಲಸ ನಿರ್ವಹಿಸಲು ಬಿಡುಯುವುದಿಲ್ಲ ಅಂತ ಮತ್ತೆ ತಂಟೆ ತಕರಾರು ಮಾಡಿದರು.
20. ಪಂಚಾಯತ ಅಭಿವೃದ್ದಿ ಅಧಿಕಾರಿಗಳು ಲಖನಾಪೂರ, ಇವರು ಲಿಖಿತ ರೂಪದಲ್ಲಿ ತಕರಾರು ಅರ್ಜಿ ಬರೆದು, ಲಖನಪೂರ ಗ್ರಾಮದ ಹಳ್ಳಕ್ಕೆ ಶಿಥಿಲವಾದ ಸೇತುವೆ ಇದ್ದು, ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರದ ಆಜು-ಬಾಜು ಗೆ ಯಾವುದೇ ಬ್ಲಾಸ್ಟಿಂಗ್ ಮಾಡಬಾರದು, ಶಿಥಿಲವಾದ ಸೇತುವೆಗೆ ಹಾನಿಯಾಗುತ್ತದೆ. ಅಂತಹ ಯಾವುದೇ ಕಾಮಗಾರಿಯನ್ನು ಮಾಡಬಾರದೆಂದು ವಿನಂತಿಸಿಕೊಂಡರು.

ಇಷ್ಟೆಲ್ಲಾ ತಂಟೆ-ತಕರಾರು ನಡೆದರೂ, ಶ್ರೀ ಶ್ಯಾಮಸುಂದರ ಕೊರಡೆ ಇವರು ಸುಮ್ಮನೆ ರಿ.ಸ.ನಂ.66/2 ರಲ್ಲಿ ನಿಂತು ಮೋಜು ನೋಡುತ್ತಾ ನಿಂತಿರುತ್ತಾರೆ. ಯಾವುದೇ ತಂಟೆ-ತಕರಾರು ಬಗೆ ಹರಿಸಲು ಅವರು ಬರುವುದಿಲ್ಲ ಹಾಗೂ ರೈತರಿಗೆ ವಿನಂತಿಸಿಕೊಳ್ಳುವುದಿಲ್ಲ. ಇವರ ವೈಯಕ್ತಿಕ ಜಗಳಗಳಲ್ಲಿ ಹುವಿಸಕಂನಿ ಅಧಿಕಾರಿಗಳು ಬಲಿಪಶು ಆಗುತ್ತಿದ್ದಾರೆ.

21. ದಿನಾಂಕ : 24.01.2018 ರಂದು ಮಾನ್ಯ ಗೌರವಾನ್ವಿತ ಶಾಸಕರು ನಿಪ್ಪಾಣಿ ಮತಕ್ಷೇತ್ರ ನನ್ನನ್ನು ಹಾಗೂ

ಶಾಖಾಧಿಕಾರಿ ಖಿಡಕಲಾಟ ಇವರನ್ನು ತಮ್ಮ ಕಛೇರಿಗೆ ಕರೆಯಿಸಿ, ನೀವು ರೈತರಿಗೆ ಏಕೆ? ತೊಂದರೆ ಕೊಡುತ್ತಿದ್ದೀರಿ, ಶ್ರೀ ಕೇಸರಕರ ಹಾಗೂ ಶ್ರೀ ಕೊರಡೆರವರ ಜಮೀನಿನ ಚೆಕ್ ಬಂದಿ ಸಂಭಂದವಾಗಿ ಕೋರ್ಟದಲ್ಲಿ ವಾದ ನಡೆದಿದ್ದು ನೀವು ಏಕೆ ರೈತರಿಗೆ ತೊಂದರೆ ಕೊಡುತ್ತಿದ್ದೀರಿ, ಹಾಗೂ ನೀವು ಕೈಗಾರಿಕಾ ವಿದ್ಯುತ ಪೊರೈಸುತ್ತಿದ್ದೀರಿ ಅದು ಎನ್.ಎ ಆಗಿರುವುದಿಲ್ಲ ಹಾಗೂ ಕೈಗಾರಿಕೆ ಸ್ಥಾಪಿಸಲು ಯಾವುದೇ ಇಲಾಖಾದಿಂದ ಅನುಮೋದನೆ ಪಡೆದುಕೊಂಡಿರುವುದಿಲ್ಲ, ಅಂತ ಹೇಳಿ ಜನರಿಗೆ ತೊಂದರೆ ಕೊಡಬೇಡಿರಿ,ಲಖನಾಪೂರ ಗ್ರಾಮವೂ ನಿಪ್ಪಾಣಿ ಇಂಡಸ್ಟ್ರಿಯಲ್ ಎಸ್ಟೇಟದಿಂದ ಸುಮಾರು 03 ಕಿ.ಮೀ. ಅಂತರದಲ್ಲಿ ಇದ್ದು. ಇಂಡಸ್ಟ್ರಿಯಲ್ ಏರಿಯಾದಲ್ಲಿ ಸಾಕಷ್ಟು ಶೆಡಗಳು ಖಾಲಿ ಬಿದ್ದಿದ್ದು, ಅಲ್ಲಿ ಕೈಗಾರಿಕೆ ಸ್ಥಾಪಿಸಿದರೆ ವಿದ್ಯುತ ಕೊಡಿರಿ ಅಂತ ನಿರ್ದೇಶಿಸಿ, ನಮ್ಮನ್ನು ಕಳುಹಿಸಿದರು.

22. ದಿನಾಂಕ 16.05.2019 ರಂದು ಹಾಗೂ ದಿನಾಂಕ: 17.07.2019 ರಂದು ಮತ್ತೆ ಅರ್ಜಿ ಕೊಟ್ಟು ಮಂಜೂರಾದ ಅಂದಾಜು ಪತ್ರಿಕೆ ಪ್ರಕಾರ ಕೆಲಸ ನಿರ್ವಹಿಸಬೇಕು ಅಂತ ಹೇಳಿದಾಗ.

23. ನಾನು ಮತ್ತು ಶಾಖಾಧಿಕಾರಿ ಖಿಡಕಲಾಟ ಮತ್ತೆ ಸ್ಥಳ ಪರಿಶೀಲಿಸಿದಾಗ ಈಗಾಗಲೆ ಕೈಗಾರಿಕೆಗೆ ಅವರ ವಿನಂತಿ

ಮೇರೆಗೆ ವಿದ್ಯುತ ಪೊರೈಸಿ ಆರ್.ಆರ್.ನಂ ಕೊಟ್ಟರೂ, ಅವರು ಕೈಗಾರಿಕೆ ಪ್ರಾರಂಭ ಮಾಡಿ, ಒಂದೇ ಒಂದು ಯುನಿಟ ಕೊಡ ಬಳಸಿರುವುದಿಲ್ಲ, ಕೈಗಾರಿಕೆ ಶೆಡದಲ್ಲಿ ಯಾವುದೇ ಕೈಗಾರಿಕೆ ಸಾಮಗ್ರಿಗಳು ಇರುವುದಿಲ್ಲ.

24. ಸ್ವಯಂ ಆರ್ಥಿಕ ಯೋಜನೆ ಅಡಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿ, ಆರ್.ಆರ್.ನಂ ಪಡೆದುಕೊಳ್ಳಲು ಆರು ತಿಂಗಳು ಕಾಲಾವಕಾಶ ಇದ್ದು ಅದರ ಪ್ರಕಾರ ಗುತ್ತಿಗೆದಾರರು ಸ್ವಯಂ ಆರ್ಥಿಕ ಯೋಜನೆ ಅಡಿಯಲ್ಲಿ 1x100 ಕೆ.ವಿ.ಎ. ವಿದ್ಯುತ ಪರಿವರ್ತಕ ಅಳವಡಿಸಿ, ಆರ್.ಆರ್.ನಂ ಕೊಟ್ಟು ನಿಮ್ಮ ಕೈಗಾರಿಕೆಗೆ ವಿದ್ಯುತ ಪೊರೈಸಲಾಗಿರುತ್ತದೆ. ಮತ್ತೆ ಅದೆ ಅಂದಾಜು ಪತ್ರಿಕೆಯ ಪ್ರಕಾರ ಕೆಲಸ ನಿರ್ವಹಿಸಬೇಕು ಅಂತ ಹೇಳುತ್ತಿದ್ದು, ಕಾನೂನಿನಲ್ಲಿ ಯಾವುದೇ ಅವಕಾಶವಿರುವುದಿಲ್ಲ ಅಂತ ಮೇಲಿನ ಗ್ರಾಹಕರಿಗೆ ಈ ಕಛೇರಿ ಪತ್ರ ಸಂಖ್ಯೆ:- ಸಕಾನಿ/ನಿಪ್ಪಾಣಿ/ಕಾಮಗಾರಿ/485 ದಿನಾಂಕ:- 28.05.2019, ನೋಂದಾಯಿತ ಅಂಚೆ ಮೂಲಕ ಸವಿಸ್ತಾರವಾಗಿ ತಿಳುಹಿಸಲಾಗಿದೆ. ಅದರ ಪ್ರತಿಯನ್ನು ಈ ಪತ್ರದ ಜೊತೆಗೆ ಲಗತ್ತಿಸಲಾಗಿದೆ.

25. ದಿನಾಂಕ 17.07.2019 ರಂದು ಮತ್ತೆ ಅರ್ಜಿ ಬರೆದು, ಪುನಃ ಅಂದಾಜು ಪತ್ರಿಕೆ ಪ್ರಕಾರ ಕೆಲಸ ನಿರ್ವಹಿಸಬೇಕು

ಅಂತ ಅರ್ಜಿ ಕೊಟ್ಟಾಗ, ಸ್ಥಳ ಪರಿಶೀಲನೆಗೆ ಹೋದಾಗ ಅಲ್ಲಿ ಯಾವುದೇ ಕೈಗಾರಿಕೆಗೆ ವಿದ್ಯುತ್ ಪೊರೈಸುವ

ಮಶೀನಗಳು ಇರದೆ ಈ ಕಛೇರಿ ಪತ್ರ ಸಂಖ್ಯೆ:- ಸಕಾನಿ/ನಿಪ್ಪಾಣಿ/ಎಮ್.ಪಿ./ಕಾಮಗಾರಿ/1155-57 ದಿನಾಂಕ

27.07.2019 ರಂದು, ಯಾವ ? ಕೈಗಾರಿಕೆಗೆ ನೀವು ವಿದ್ಯುತ್ ಪೂರೈಸಬೇಕು ಅಂತ ಕೇಳುತ್ತಿರಿ, ಎಲ್ಲ ದಾಸ್ತಾವೇಜುಗಳನ್ನು ಒಪ್ಪಿಸಿರಿ ಅಂತ ನೋಂದಾಯಿತ ಅಂಚೆ ಮೂಲಕ ಪತ್ರ ಬರೆದು ತಿಳುಹಿಸಲಾಗಿತ್ತು, ಈ ಪತ್ರದ ಪ್ರತಿಯನ್ನು ಲಗತ್ತಿಸಲಾಗಿದೆ.

26. ಈಗ, ತಮ್ಮ ಕಛೇರಿ ಪತ್ರದ ಸಂಖ್ಯೆ ಉಲ್ಲೇಖ 2) ರಲ್ಲಿ ತಿಳುಹಿಸಿದಂತೆ ಆ ಪತ್ರಕ್ಕೆ ಮೇಲಿನಂತೆ ಸವಿಸ್ತಾರವಾದ ಮಾಹಿತಿಯನ್ನು ಒದಗಿಸಲಾಗಿರುತ್ತದೆ.

ಮೇಲೆ ನಮೂದಿಸಿದ 60 ಹೆಚ್.ಪಿ. ವಿದ್ಯುತ್ ಸ್ಥಾವರಕ್ಕೆ 11 ಕೆ.ವ್ಹಿ ವಿ.ಎಮ್.ಕೆ.ಎ.ಎಸ್. ಲೈನದಿಂದ ಟ್ಯಾಪ ಮಾಡಿ ಕೊಡಲಾಗಿದ್ದು, ಅದು ಲಖನಾಪೂರ ಶಿಥಿಲವಾದ ಹಳ್ಳದ ಮುಖಾಂತರ ಹಾದು ಹೋಗುತ್ತದೆ. ಹಳ್ಳದಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸಿದರೆ ಮುಂದೆ ಮಳೆಗಾಲದಲ್ಲಿ ಮಳೆಯ ರಭಸದಿಂದ ವಿದ್ಯುತ್ ಅಪಘಾತ ಸಂಭವಿಸಬಹುದೆಂದು. ಹಳ್ಳದಲ್ಲಿ ವಿದ್ಯುತ ಕಂಬ ಅಳವಡಿಸಬೇಕು ಅಥವಾ ಬೇಡ ಎಂಬುದರ ಬಗ್ಗೆ ಸಲಹೆ ಪಡೆಯಲು, ಮಾನ್ಯ ಉಪ ವಿದ್ಯುತ ಪರಿವೀಕ್ಷಕರು-2 ಕರ್ನಾಟಕ ಸರ್ಕಾರ ಬೆಳಗಾವಿ, ಇವರಿಗೆ ಪತ್ರ ಬರೆದು, ಸ್ಥಳ ಪರಿಶೀಲಿಸಿ, ಸಲಹೆ ಕೊಡಬೇಕು ಅಂತ ಈ ಕಛೇರಿ ಪತ್ರ ಸಂಖ್ಯೆ:- ಸಕಾನಿ/ನಿಪ್ಪಾಣಿ/ಕಾಮಗಾರಿ/480-82 ದಿನಾಂಕ 25.05.2019 ರಂದು ಪತ್ರ ಬರೆದು, ಸ್ಥಳ ಪರಿಶೀಲನೆಗೆ ಬರಬೇಕು ಎಂದು ವಿನಂತಿಸಿಕೊಂಡಾಗ ಮಾನ್ಯ ಉಪ ವಿದ್ಯುತ್ ಪರಿವೀಕ್ಷಕರು-2 ಕರ್ನಾಟಕ ಸರ್ಕಾರ ಬೆಳಗಾವಿ. ಇವರು ದಿನಾಂಕ 03.06.2019 ರಂದು ಸ್ಥಳ ಪರಿಶೀಲಿಸಿ ಶಿಥಿಲವಾದ ಸೇತುವೆ ಹತ್ತಿರ ಹಾಗೂ ಹಳ್ಳದಲ್ಲಿ ವಿದ್ಯುತ ಕಂಬ ಅಳವಡಿಸಲು ಬರುವುದಿಲ್ಲ ಅಂತ ಮೌಖಿಕವಾಗಿ ತಿಳುಹಿಸಿದರು.

ಮೇಲಿನ ವಿಷಯಗಳ ಬಗ್ಗೆ ಸವಿಸ್ತಾರವಾಗಿ ವಿಚಾರ ಮಾಡಲಾಗಿ, ಶ್ರೀ ಶ್ಯಾಮಸುಂದರ ಕೊರಡೆ ಸಾ.ಲಖನಾಪೂರ ಇವರು, ಯಾವುದೆ ಕೈಗಾರಿಕೆ ಸ್ಥಾಪಿಸಲು ಉದ್ದೇಶ ಇರದೆ ಈ ಪ್ರಕಾರವಾಗಿ ಅನವಶ್ಯಕ ಪತ್ರ ವ್ಯವಹಾರ ಮಾಡುತ್ತ ಅವರ ಜಮೀನಿಗೆ 24 ತಾಸು ವಿದ್ಯುತ ಪೊರೈಸಿಕೊಂಡು ಹೊಲದಲ್ಲಿ ಪ್ಲಾಟಗಳನ್ನು ಹಾಕಿ, ಮಾರುವ ಉದ್ದೇಶ ಹೊಂದಿರುತ್ತಾರೆ ಅಂತ ಸ್ಥಾನಿಕ ಚೌಕಾಸಿದಿಂದ ಕಂಡು ಬಂದಿರುತ್ತದೆ.

4. ಕಾರ್ಯನಿರ್ವಾಹಕ ಇಂಜಿನಿಯರರು(ವಿ), ಕಾರ್ಯ & ಪಾಲನೆ ವಿಭಾಗ, ಹುವಿಸಕಂನಿ, ಚಿಕ್ಕೊಡಿ ಇವರು ಸ್ವಯಂ ಆರ್ಥಿಕ ಯೋಜನೆ ಅಡಿಯಲ್ಲಿ ಕಾಮಗಾರಿ ನಿರ್ವಹಿಸಲು ನೀಡಿರುವ ಅನುಮೋದನೆ ಪತ್ರ ಸಂಖ್ಯೆ:ಚಿಕ್ಕೊಡಿ/ಕಾನಿಇಂ/ಸಕಾನಿಇಂ(ಕ)/ ಸಇಂ(ತಾ)/17-18/ 6978-79 ದಿನಾಂಕ:23.10.2017 ರಲ್ಲಿ ಶ್ರೀ ಶಾಮಸುಂದರ ಬಿ ಕೊರಡೆ, ಲಖಾನಾಪೂರ ಇವರಗೆ ಈ ಕೆಳಗಿನ ಷರತ್ತುಗಳ ಒಳಪಟ್ಟು ಸ್ವಯಂ ಆರ್ಥಿಕ ಯೋಜನೆ ಅಡಿಯಲ್ಲಿ ವಿದ್ಯುತ ಸಂಪರ್ಕ ಪಡೆಯಲು ಅನುಮೋದನೆಯನ್ನು ನೀಡಿರುತ್ತಾರೆ;

1. You have to carryout the work of extension of, HT/DTC/LT,work at your own cost under “Self Execution”.

2. The work shall be carried out through duly qualified Licensed Electrical Contractor holding valid class-I License and as per the estimate prepared by HESCOM and under the Supervision of HESCOM Ltd.
3. After completion of work HESCOM Ltd. Shall take inventory jointly with you or your representative. If there are deficiencies compared to the quality of execution of the work, the same shall be rectified by you and joint inventory should submit to Division office.
4. You are requested to give an INDEMNITY bond on Rs100 Stamped paper indemnifying the bearing of any expenditure towards loss of life/Limb/Property
5. The materials used shall conform to relevant ISI specification. The quality of work such as depth of planting of poles, errection of poles, Transformer etc., shall be as per the standard drawings and practice of HESCOM Ltd.
6. The materials used should be got inspected & approved by TA & QC Hescom., Hubli.
7. The guarantee shall be furnished on stamp paper of Rs 100/- for a period not less than one year for materials used in the work as well as the quality of work carried out from the date of taking over line by HESCOM Ltd.
8. After completion of work you should take necessary approval from Electrical Inspectorate.
9. The charges to be paid by you are as follow:

| | |
|---|---|
| 1.ISD | Rs-33,262=00 |
| 2.10% Supervision charges | Rs- 35,254=00 |
| 3.9% C GST | Rs- 3,173=00 |
| 4. 9% S GST | Rs- 3,173=00 |

10. All safety precautions shall be provided.
11. you should Purchased suitable capacity energy meter by your own cost .
12. Obtain the local authority licenses/pollution control certificate from concern dept before service the installation.
13. All the formalities have to be fulfilled within THREE months from the date of this letter failing which power sanction stands cancelled.
14. As per the Karnataka Govt. order GOK No En 119 VSC 2017 Bangalore Dtd: 07.06.2017 you have to install 4 star rated Transformer in rural area with effect from 01.07.2017.

**ವೇದಿಕೆಯ ಅಭಿಪ್ರಾಯ:**

ದೂರುದಾರರು ಸಲ್ಲಿಸಿರುವ ದೂರಿನ ಕುರಿತು, ದೂರುದಾರರು ಹಾಗೂ ಪ್ರತಿವಾದಿ ಸಲ್ಲಿಸಿರುವ ಲಿಖಿತ ದಾವೆಯನ್ನು ಹಾಗೂ ಇತರೆ ದಾಖಲೆಗಳನ್ನು ಅವಲೋಕಿಸಲಾಗಿ, ವೇದಿಕೆಯ ಅಭಿಪ್ರಾಯ ಈ ಕೆಳಗಿನಂತೆ ಇರುತ್ತದೆ:

- ದೂರುದಾರರು ಈಗಾಗಲೇ ನಿಯಾಮಾನುಸಾರ ಸ್ವಯಂ ಆರ್ಥಿಕ ಯೋಜನೆ ಅಡಿಯಲ್ಲಿ ಜಕಾತಿ ಎಲ್ ಟಿ-5 ರಡಿಯಲ್ಲಿ ಸ್ಥಾವರ ಸಂಖ್ಯೆ: **ಎಲ್.ಕೆ.ಪಿ.ಆರ.ಎಮ್.ಪಿ. 53927** ಗೆ 60 ಅಶ್ವ ಶಕ್ತಿ ವಿದ್ಯುತ ಸಂಪರ್ಕವನ್ನು ದಿ:05.01.2018 ರಂದು ಪಡೆದಿರುತ್ತಾರೆ.
- ಕಾರ್ಯನಿರ್ವಾಹಕ ಇಂಜಿನಿಯರರು(ವಿ), ಕಾರ್ಯ & ಪಾಲನೆ ವಿಭಾಗ, ಹುವಿಸಕಂನಿ, ಚಿಕ್ಕೋಡಿ ಇವರು ಸ್ವಯಂ ಆರ್ಥಿಕ ಯೋಜನೆ ಅಡಿಯಲ್ಲಿ ಕಾಮಗಾರಿ ನಿರ್ವಹಿಸಲು ನೀಡಿರುವ ಅನುಮೋದನೆ ಪತ್ರ ಸಂಖ್ಯೆ:ಚಿಕ್ಕೋಡಿ/ಕಾನಿಇಂ/ಸಕಾನಿಇಂ(ಕ)/ ಸಇಂ(ತಾ)/17-18/ 6978-79 ದಿನಾಂಕ:23.10.2017 ರಲ್ಲಿ ಷರತ್ತುಗಳ ಒಳಪಟ್ಟು ಸ್ವಯಂ ಆರ್ಥಿಕ ಯೋಜನೆ ಅಡಿಯಲ್ಲಿ ವಿದ್ಯುತ ಸಂಪರ್ಕ ಪಡೆಯಲು ಅನುಮೋದನೆಯನ್ನು ನೀಡಿರುತ್ತಾರೆ. ಸದರಿ ಅನುಮೋದನೆಯಲ್ಲಿನ ಷರತು ಸಂಖ್ಯೆ:13 ರಲ್ಲಿ "All the formalities have to be fulfilled within THREE months from the date of this letter failing which power sanction stands cancelled" ಎಂದು ಇರುತ್ತದೆ.

ಆದ್ದರಿಂದ, ಈಗಾಗಲೇ ದೂರುದಾರರು ಸ್ವಯಂ ಆರ್ಥಿಕ ಯೋಜನೆ ಅಡಿಯಲ್ಲಿ ವಿದ್ಯುತ ಸಂಪರ್ಕವನ್ನು ಪಡೆದಿರುತ್ತಾರೆ. ಆದರೆ ಈಗ, ಈ ಮೊದಲು ಮಂಜೂರು ಮಾಡಿರುವ ಅಂದಾಜು ಪಟ್ಟಿಯನ್ವಯ ಕಾಮಗಾರಿಯನ್ನು

ಪೂರ್ಣಗೊಳಿಸಲು ಅಥವಾ ಹೊಸ ಅಂದಾಜು ಪಟ್ಟಿ ತಯಾರಿಸಿ ಕಾಮಗಾರಿ ಮಾಡಬೇಕು ಎಂಬುದು ಪ್ರಸ್ತುತ ವಾಸ್ಥವಿಕ ವಿದ್ಯುತ ಮಾರ್ಗ/ಮಾರ್ಗದ ಸಾಮರ್ಥ್ಯ ಹಾಗೂ ಸ್ಥಾನಿಕ ವರದಿಯ ಮೇಲೆ ಇರುತ್ತದೆ. ಆದ್ದರಿಂದ, ದೂರುದಾರರು ಕಾಮಗಾರಿಯನ್ನು ಪೂರ್ಣಗೊಳಿಸಲು ಅರ್ಜಿಯನ್ನು ಮರು ನೊಂದಣಿ ಮಾಡಿಸಿ ನಿಗಮ ನಿಯಾಮಾನುಸಾರ ಕಾಮಗಾರಿಯನ್ನು ಪೂರ್ಣಗೊಳಿಸಕೊಳ್ಳಬಹುದು ಎಂದು ಅಭಿಪ್ರಾಯ ಪಡಲಾಗಿದೆ.

ದೂರಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ:ಬೆ/ಗ್ರಾವೆ/ಅಇಂ(ವಿ)/ಉಲೆನಿ/ಹಿಸ-2/2019-20: CYS-212 ದಿನಾಂಕ: 13 DEC 201**

ಸ್ಥಾವರ ಸಂಖ್ಯೆ: LKPR53927 ಕ್ಕೆ ಸಂಬಂಧಿಸಿದಂತೆ, ಸ್ವಯಂ ಆರ್ಥಿಕ ಯೋಜನೆ ಅಡಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ದೂರುದಾರರು ಅರ್ಜಿಯನ್ನು ಮರು ನೊಂದಣಿ ಮಾಡಿಸುವುದು ಹಾಗೂ ಪ್ರತಿವಾದಿಗಳು ನಿಯಾಮಾನುಸಾರ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕ ಆದೇಶಿಸಲಾಗಿದೆ.

(ಶರಿಪುದ್ಧಿನ ಅಹ್ಮದ)
ಉಪಲೆಕ್ಕ ನಿಯಂತ್ರಣಾಧಿಕಾರಿ
ಹಾಗೂ ಗ್ರಾಕುಂಕೊನಿವೇ ಸದಸ್ಯರು
ಕಾ & ಪಾ ವೃತ್ತ, ಬೆಳಗಾವಿ.

(ಸುನೀಲ ಸಾಣಿಕೊಪ್ಪ)
ಆಯೋಗದಿಂದ ನಿಯೋಜಿಸಲಾದ
ಸದಸ್ಯರು.

(ಗಿರಿಧರ ಕುಲಕರ್ಣಿ)
ಅಧೀಕ್ಷಕ ಇಂಜಿನೀಯರ(ವಿ)
ಕಾ & ಪಾ ವೃತ್ತ, ಹೆಸ್ಕಾಂ, ಬೆಳಗಾವಿ
ಹಾಗೂ ಅಧ್ಯಕ್ಷರು, ಬೆಳಗಾವಿ ಜಿಲ್ಲೆ,
ಗ್ರಾ.ಕುಂ.ಕೊ.ನಿ.ವೇದಿಕೆ.

ಗೆ,

**ಶ್ರೀ ಶಾಮಸುಂದರ ಬಿ ಕೋರಡೆ,**
(R.R.NO: LKPR 53927)
ಆರ್ ಎಸ್ ನಂ:62/2, ಲಖನಾಪೂರ ಗ್ರಾಮ,
ತಾ:ಚಿಕ್ಕೊಡಿ, ಜಿ:ಬೆಳಗಾವಿ.

**"ನೊಂದಣಿ ಅಂಚೆ ಮುಖಾಂತರ"**

**ಪ್ರತಿ:**

1. ಮುಖ್ಯ ಇಂಜಿನೀಯರ(ವಿ), ಬೆಳಗಾವಿ ವಲಯ, ಹುವಿಸಕಂನಿ., ಬೆಳಗಾವಿ.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ನಿಗಮ ಕಛೇರಿ, ಹುವಿಸಕಂನಿ, ಹುಬ್ಬಳ್ಳಿ.
3. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ನಗರ ವಿಭಾಗ, ಹುವಿಸಕಂನಿ., ಚಿಕ್ಕೊಡಿ ಇವ[illegible] ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಉಪ ವಿಭಾಗ, ಹುವಿಸಕಂನಿ., ನಿಪ್ಪಾಣಿ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಮಹಾ ಕಡತ